145ನೇ(ಆ)ಅಧಿವೇಶನ
ಕ್ರ-121
ನಿ-72
ಉನ್ನತ ಶಿಕ್ಷಣ

**ಕರ್ನಾಟಕ ವಿಧಾನ ಪರಿಷತ್**

**145ನೇ ಅಧಿವೇಶನ-2021**

**ನಿಯಮ-72ರಡಿಯ ಸೂಚನೆ**

| | |
|---|---|
| ಸೂಚನೆ ನೀಡಿದ ಸದಸ್ಯರ ಹೆಸರು | ಶ್ರೀ ಕಾಂತರಾಜು(ಬಿಎಂಎಲ್),<br>ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು |

**ವಿಷಯ**

2001 ನೇ ಇಸವಿಯಿಂದ ರಾಜ್ಯದಲ್ಲಿ ಕಾನೂನು ವಿಶ್ವವಿದ್ಯಾಲಯವು ಸ್ಥಾಪನೆಯಾಗುವ ಮೊದಲು ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಕಾನೂನು ಪದವಿಯನ್ನು ವ್ಯಾಸಂಗ ಮಾಡುತ್ತಿದ್ದ ಸಾವಿರಾರು ವಿದ್ಯಾರ್ಥಿಗಳ ಪೈಕಿ ಉತ್ತೀರ್ಣರಾಗಲು ಬಾಕಿ ಇರುವ 100 ರಿಂದ 200 ವಿದ್ಯಾರ್ಥಿಗಳು 3 ವರ್ಷದ ಮತ್ತು 5 ವರ್ಷದ ಕೋರ್ಸುಗಳನ್ನು ಮುಗಿಸಿದ್ದರೂ ಸಹ, ಪದವಿಯನ್ನು ಪೂರ್ಣಗೊಳಿಸದೇ, ಕೆಲವು ಪಠ್ಯ ವಿಷಯಗಳನ್ನು ಉಳಿಸಿಕೊಂಡಿರುತ್ತಾರೆ. ಕಾಲೇಜು ಮತ್ತು ವಿಶ್ವವಿದ್ಯಾಲಯದ ಎಲ್ಲಾ ಶುಲ್ಕಗಳನ್ನು ಪಾವತಿ ಮಾಡಿ ಅನಿವಾರ್ಯ ಕಾರಣಗಳಿಂದ ಕೆಲವು ಪಠ್ಯ ವಿಷಯಗಳನ್ನು ಬಾಕಿ ಉಳಿಸಿಕೊಂಡು ಕಾನೂನು ಪದವಿ ಪಡೆಯಲು ಸಾಧ್ಯವಾಗದೇ ಕರುಣಾಜನಕ ಸ್ಥಿತಿಯಲ್ಲಿರುವಂತಹ ವಿದ್ಯಾರ್ಥಿಗಳಿಗೆ ಒಂದು ಬಾರಿಯ ಕ್ರಮವಾಗಿ(One Time Measure) ಪರೀಕ್ಷೆಗಳನ್ನು ನಡೆಸಿ ಕಾನೂನು ಪದವಿಗಳನ್ನು ಪಡೆಯಲು ಅವಕಾಶ ಮಾಡಿಕೊಡುವ ಬಗ್ಗೆ.

**ಸೂಚನೆಯ ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿಕೆ**

ದಿನಾಂಕ:03.09.2021 ರಂದು ನಡೆದ ಬೆಂಗಳೂರು ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ ಕೈಗೊಳ್ಳಲಾಗಿರುವ ನಿರ್ಣಯದಂತೆ, ರಾಜ್ಯದಲ್ಲಿ ಕಾನೂನು ವಿಶ್ವವಿದ್ಯಾಲಯವು ಸ್ಥಾಪನೆಯಾಗುವ ಮೊದಲು ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ 3 ವರ್ಷದ ಮತ್ತು 5 ವರ್ಷದ ಪದವಿ ಕೋರ್ಸುಗಳನ್ನು ಯಾವುದೇ ವಿಘ್ನತೆ ಇಲ್ಲದೆ ಮುಗಿಸಿದ್ದರೂ ಸಹ, ಪದವಿಯನ್ನು ಪೂರ್ಣಗೊಳಿಸದೇ, ಕೆಲವು ಪಠ್ಯ ವಿಷಯಗಳನ್ನು ಬಾಕಿ ಉಳಿಸಿಕೊಂಡಿರುವ ವಿದ್ಯಾರ್ಥಿಗಳಿಗೆ 2022 ನೇ ಸಾಲಿನ ಫೆಬ್ರುವರಿ/ಮಾರ್ಚ್ ಮಾಹೆಗಳಲ್ಲಿ ನಡೆಯುವ ಪರೀಕ್ಷೆಗಳನ್ನು ಬರೆಯಲು ಒಂದು ಬಾರಿಯ ಕ್ರಮವಾಗಿ ಅಂತಿಮ ಅವಕಾಶವನ್ನು ನೀಡಲಾಗುತ್ತಿದೆ.

(ಡಾ॥ ಅಶ್ವಥ್‌ನಾರಾಯಣ ಸಿ.ಎನ್)
ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಇಡಿ/ 325 /ಯುಆರ್‌ಸಿ/2021